**ದಿನಾಂಕ: 20.03.2020 ರಂದು ಅಪರಾಹ್ನ 2.15 ಕ್ಕೆ ಗಂಟೆಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ವಿಧಾನ ಸೌಧದ ಮೂರನೇ ಮಹಡಿಯ "ಸಮಿತಿ ಕೊಠಡಿ"ಯಲ್ಲಿ ನಡೆದ 14 ನೇ ರಾಜ್ಯ ವನ್ಯಜೀವಿ ಮಂಡಳಿಯ ನಡವಳಿ.**

**ಹಾಜರಿದ್ದ ಸದಸ್ಯರುಗಳು:-**

**(ಶ್ರೀಯುತರು)**

| | | |
|---|---|---|
| 1. | ಶ್ರೀ ಬಿ.ಎಸ್ ಯಡಿಯೂರಪ್ಪ,<br>ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು |
| 2 | ಶ್ರೀಮತಿ ಸೌಮ್ಯರೆಡ್ಡಿ, ಮಾನ್ಯ ಶಾಸಕರು, ಜಯನಗರ ವಿಧಾನಸಭಾ ಕ್ಷೇತ್ರ. | ಸದಸ್ಯರು |
| 3 | ಶ್ರೀ ಎಂ. ಅಶ್ವಿನ್ ಕುಮಾರ್, ಮಾನ್ಯ ಶಾಸಕರು, ಟಿ. ನರಸೀಪುರ ವಿಧಾನಸಭಾ ಕ್ಷೇತ್ರ. | ಸದಸ್ಯರು |
| 4 | ಶ್ರೀ ಅಪ್ಪಾಜಿಗೌಡ ಎನ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು. | ಸದಸ್ಯರು |
| 5 | ಡಾ. ಸಂದೀಪ್ ದವೆ, *ಭಾ.ಆ.ಸೇ,*<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು. | ಸದಸ್ಯರು |
| 6 | ಶ್ರೀ ಪುನಾಟಿ ಶ್ರೀಧರ್, *ಭಾ.ಅ.ಸೇ.,*<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು | ಸದಸ್ಯರು |
| 7 | ಶ್ರೀ. ಕುಮಾರ ನಾಯ್ಕ್, *ಭಾ.ಆ.ಸೇ.,* ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು. | ಸದಸ್ಯರು |
| 8 | ಡಾ॥ ರವೀಂದ್ರನಾಥ್. *ಭಾ.ಪೋ.ಸೇ.,* ಎಡಿಜಿಪಿ, ಫಾರೆಸ್ಟ್ ಸೆಲ್, ಬೆಂಗಳೂರು. | ಸದಸ್ಯರು |
| 9 | ಶ್ರೀ. ಕುಮಾರ್ ಪುಷ್ಕರ್, *ಭಾ.ಅ.ಸೇ.*<br>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು. | ಸದಸ್ಯರು |
| 10 | ನಿರ್ದೇಶಕರು, ಮೀನುಗಾರಿಕಾ ಇಲಾಖೆ, ಬೆಂಗಳೂರು. | ಸದಸ್ಯರು |
| 11 | ನಿರ್ದೇಶಕರು, ಪಶುಸಂಗೋಪನೆ ಹಾಗೂ ಪಶುವೈದ್ಯ ಸೇವೆ, ಬೆಂಗಳೂರು. | ಸದಸ್ಯರು |
| 12 | ಡಾ॥ ಎನ್.ಸಿ. ಶಿವಪ್ರಕಾಶ್ ಪ್ರೊಫೆಸರ್, ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಮೈಸೂರು. | ಸದಸ್ಯರು |
| 13 | ಶ್ರೀ ಮಲ್ಲೇಶಪ್ಪ, ಅಧ್ಯಕ್ಷರು, ಸ್ವಾಮಿ ವಿವೇಕಾನಂದ ಸೇವಾ ಟ್ರಸ್ಟ್ (ರಿ), ಚಾಮರಾಜನಗರ | ಸದಸ್ಯರು |
| 14 | ಶ್ರೀ ಸಂಜಯ್ ಗುಬ್ಬಿ, 2208/ಬಿ, ಸಾದನ ರಸ್ತೆ, ಕೆ.ಆರ್ ಎಕ್ಸ್‌ಟೆನ್ಸನ್, ತುಮಕೂರು-572101 | ಸದಸ್ಯರು |
| 15 | ಶ್ರೀ ಅಲೋಕ್ ವಿಶ್ವನಾಥ್,<br>ಸಿಂಗನಾಯಕನಹಳ್ಳಿ, ಬೆಂಗಳೂರು-560064. | ಸದಸ್ಯರು |
| 16 | ಶ್ರೀ ನವೀನ್ ಜೆ.ಎಸ್,<br>ನಂ.20, 2ನೇ ಮಹಡಿ, ರೇಮೆಂಡ್ ಶೋರೂಂ ಮೇಲೆ,<br>ಡಿ.ವಿ.ಜಿ ರಸ್ತೆ, ಬಸವನಗುಡಿ, ಬೆಂಗಳೂರು. | ಸದಸ್ಯರು |

| | | |
|---|---|---|
| 17 | ಶ್ರೀ ಚೇತನ್ ಬಿ, ನಂ.151, ಆರ್.ಎಲ್.ಜಾಲಪ್ಪ ಕಾಲೇಜ್ ರೋಡ್, ಕೊಡಿಗೆಹಳ್ಳಿ, ದೊಡ್ಡಬಳ್ಳಾಪುರ, ಬೆಂಗಳೂರು–561203. | ಸದಸ್ಯರು |
| 18 | ಶ್ರೀ ಸಂಜಯ್ ಮೋಹನ್, ಭಾ.ಅ.ಸೇ., ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ, ಬೆಂಗಳೂರು | ಸದಸ್ಯ ಕಾರ್ಯದರ್ಶಿಗಳು |

**ಗೈರು ಹಾಜರಿ ರಜೆ (leave of absence):**

1. ಶ್ರೀ. ಆನಂದ್ ಸಿಂಗ್, ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ.
2. ಶ್ರೀ ರಾಣಾ ಜಾರ್ಜ್, ಮೆ: ಕೆಲಚಂದ್ರ ಗ್ರೂಪ್ ಆಫ್ ಕಂಪನೀಸ್, ನಂ. 16, ಸೇಂಟ್ ಮಾರ್ಕ್ ರೋಡ್, ಬೆಂಗಳೂರು.
3. ಶ್ರೀ ದಿನೇಶ್ ಸಿಂಗ್ವಿ, ಪ್ರೈಡ್ ಎಲೈಟ್ 10, ಮ್ಯೂಸಿಯಂ ರೋಡ್, ಬೆಂಗಳೂರು–560001.
   (ಇ–ಮೇಲ್ ಮುಖಾಂತರ ಯೋಜನೆಗೆ ಅನುಮೋದನೆ ನೀಡಲು ತಿರಸ್ಕರಿಸುವಂತೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಪ್ರತಿ ಲಗತ್ತಿಸಿದೆ)
4. ಅಜಯ್ ಎ ದೇಸಾಯಿ, ಬಿಸಿ 84 ಕ್ಯಾಂಪ್, ಬೆಳಗಾವಿ.
   (ಇ–ಮೇಲ್ ಮುಖಾಂತರ ಯೋಜನೆಗೆ ಅನುಮೋದನೆ ನೀಡಲು ತಿರಸ್ಕರಿಸುವಂತೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಪ್ರತಿ ಲಗತ್ತಿಸಿದೆ)

**ವಿಶೇಷ ಆಹ್ವಾನಿತರು:**

1. ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಸಚಿವರು, ಸಕ್ಕರೆ ಇಲಾಖೆ ಹೊರತುಪಡಿಸಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಮತ್ತು ಸಾರ್ವಜನಿಕ ಉದ್ಯಮ ಇಲಾಖೆ. ಕರ್ನಾಟಕ ಸರ್ಕಾರ.
2. ಶ್ರೀ ಶಿವರಾಮ ಹೆಬ್ಬಾರ, ಮಾನ್ಯ ಶಾಸಕರು, ಹಳಿಯಾಳ ವಿಧಾನಸಭಾ ಕ್ಷೇತ್ರ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ದೊಡ್ಡ ಮತ್ತು ಮಧ್ಯಮ ಪ್ರಮಾಣದ ಸಕ್ಕರೆ ಕೈಗಾರಿಕಾ ಸಚಿವರು. ಕರ್ನಾಟಕ ಸರ್ಕಾರ.
3. ಶ್ರೀ ಆರ್. ವಿ. ದೇಶಪಾಂಡೆ, ಮಾನ್ಯ ಶಾಸಕರು, ಹಳಿಯಾಳ ವಿಧಾನಸಭಾ ಕ್ಷೇತ್ರ ಹಾಗೂ ಮಾಜಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು.
4. ಶ್ರೀ ಟಿ. ಎಮ್. ವಿಜಯ ಭಾಸ್ಕರ್, ಭಾ.ಆ.ಸೇ., ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
5. ಶ್ರೀ ಸುಭಾಷ್ ಮಾಲ್ಕೇಡೆ, ಭಾಅಸೇ. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು.
6. ಶ್ರೀ. ಜಿ. ವಿ. ರಂಗರಾವ್, ಭಾಅಸೇ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ (ಆನೆ ಯೋಜನೆ) ಬೆಂಗಳೂರು.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರು ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಂಡಳಿಯ ಎಲ್ಲಾ ಸದಸ್ಯರುಗಳನ್ನು 14 ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಗೆ ಸ್ವಾಗತಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು ಮತ್ತು ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಸಭೆಗೆ ನಮಿಸುತ್ತಾ, ದಿನಾಂಕ: 09–03–2020 ರಂದು ನಡೆದ 13ನೇ ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಏಳು ಕಾರ್ಯಸೂಚಿಗಳನ್ನು ಚರ್ಚಿಸಿ ಒಪ್ಪಿಗೆ ಪಡೆದಿದ್ದು, ಕರಡು ನಡವಳಿಯನ್ನು ಸನ್ಮಾನ್ಯ ಅಧ್ಯಕ್ಷರ ಅನುಮೋದನೆಗಾಗಿ ಸಲ್ಲಿಸಿದಾಗ ಹುಬ್ಬಳ್ಳಿ–ಅಂಕೋಲ ರೈಲ್ವೇ ಯೋಜನೆಯನ್ನು ಪುನಃ ಚರ್ಚಿಸಲು ದಿನಾಂಕ: 20.03.2020 ರಂದು ಮತ್ತೊಮ್ಮೆ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯನ್ನು ಕರೆಯುವಂತೆ ನಿರ್ದೇಶನ

ನೀಡಲಾದ ಮೇರೆಗೆ ಪ್ರಸ್ತುತ 14 ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯನ್ನು ನಿಗಧಿಪಡಿಸಲಾಗಿದೆಯೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಂಡಳಿಯ ಸಭಾಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತ, ಹುಬ್ಬಳ್ಳಿ–ಅಂಕೋಲಾ ರೈಲ್ವೇ ಲೈನ್ ಯೋಜನೆಯ ಬಗ್ಗೆ ಕಳೆದ ಮೀಟಿಂಗ್‌ನಲ್ಲಿ ಬಹಳ ವಿಸ್ತೃತವಾಗಿ ಚರ್ಚೆ ಮಾಡಿದ್ದೇವೆ. ಸದರಿ ಯೋಜನೆಗೆ ಸಂಬಂಧಪಟ್ಟಂತೆ ರೈಲ್ವೇ ಇಲಾಖೆಯವರು ಯೋಜನೆಗೆ ಬೇಕಾದ ಅರಣ್ಯ ಪ್ರದೇಶವನ್ನು ಕಡಿಮೆ ಮಾಡಿದ್ದಾರೆ ಹಾಗೂ ಮರಗಳ ಕಟಾವಣೆಯಲ್ಲಿ ಕಡಿಮೆ ಮಾಡಿರುವುದನ್ನು ನನ್ನ ಗಮನಕ್ಕೆ ಬಂದಿದೆ. ಹಾಗೆಯೇ ಈ ಯೋಜನೆಯು ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶದ ಪ್ರಮುಖ ಆಕಾಂಕ್ಷೆ ಆಗಿರುವುದರಿಂದ ಎಲ್ಲಾ ಪಾಲುದಾರರ ಅಭಿಪ್ರಾಯಗಳನ್ನು ಕೇಳಲು ಸಭೆ ಕರೆದಿರುವುದಾಗಿ ಹೇಳಿದರು.

ನಂತರ ಸಭೆಗೆ ವಿಶೇಷವಾಗಿ ಆಗಮಿಸಿದ್ದ ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಸಚಿವರು, ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು, ಸಭಾಧ್ಯಕ್ಷರಿಗೆ ನಮಿಸುತ್ತಾ ಹುಬ್ಬಳ್ಳಿ–ಅಂಕೋಲಾ ನಡುವೆ ಹೊಸ ಬ್ರಾಡ್ ಗೇಜ್ ರೈಲ್ವೆ ಮಾರ್ಗವನ್ನು ನಿರ್ಮಾಣ ಮಾಡುವ ಬಗ್ಗೆ ಅರಣ್ಯ ಭೂಮಿ ಬಿಡುಗಡೆ ಮಾಡುವ ವಿಷಯದ ಕುರಿತು ಮಾತನಾಡಲು ಆರಂಭಿಸಿದರು. ಹುಬ್ಬಳ್ಳಿ–ಅಂಕೋಲ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರು ಶಿರಸಿ ಯಲ್ಲಾಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗುದ್ದಲಿ ಪೂಜೆಯನ್ನು ನಡೆಸಿರುತ್ತಾರೆ. ಒಂದು ಪ್ರದೇಶದ ಅಭಿವೃದ್ಧಿಯನ್ನು ಪರಿಗಣಿಸುವ ಸಂದರ್ಭದಲ್ಲಿ ಈ ಯೋಜನೆಯು ಅವಶ್ಯಕವೆಂದೂ ಮತ್ತು ಮೂಲಸೌಕರ್ಯ ಒದಗಿಸುವ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಬೇಕೆಂದು ಹೇಳಿದರು. ಅದಲ್ಲದೇ ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ಉತ್ತರ ಕರ್ನಾಟಕ ಜನರ ಕನಸಾಗಿದೆ ಹಾಗೂ ಆ ಕನಸು ಈಗ ನನಸಾಗೊ ಸಮಯ ಬಂದಿದೆ. ಅದಕ್ಕಾಗಿ ಕೈಗಾರಿಕಾ ಸಚಿವನಾಗಿ ನಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶ ಮಾಡಿಕೊಟ್ಟ ಮಾನ್ಯ ಮುಖ್ಯ ಮಂತ್ರಿಯವರಿಗೆ ಧನ್ಯವಾದಗಳನ್ನು ಅರ್ಪಿಸಿ ಕರ್ನಾಟಕದ ಅಭಿವೃದ್ಧಿ ಬೆಂಗಳೂರು ಸೆಂಟ್ರಿಕ್ ಆಗಿದೆ ಹಾಗೂ ಕರ್ನಾಟಕವನ್ನು *ಟೈರ್–2* ಕೈಗಾರಿಕಾ ಕ್ಷೇತ್ರವನ್ನಾಗಿ ಮಾಡಬೇಕಾಗಿದೆ ಎಂದು ಹೇಳಿದರು. ಅದಕ್ಕಾಗಿ ಇತ್ತೀಚಿಗೆ ಕರ್ನಾಟಕ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಫೆಬ್ರುವರಿಯಲ್ಲಿ "*ಇನ್ವೆಸ್ಟ್ ಇನ್ ಕರ್ನಾಟಕ*" ಸಮಾವೇಶವನ್ನು ಹುಬ್ಬಳಿಯಲ್ಲಿ ಕೈಗೊಳ್ಳಲಾಗಿದ್ದು ಹಾಗೂ ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ಹಾಗೂ ಬೇಲೆಕೆರೆ ಬಂದರಿನ ಅಭಿವೃದ್ಧಿಯ ಬೇಡಿಕೆ ಇಟ್ಟಿರುವುದಾಗಿ ತಿಳಿಸಿದರು. ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ಹಾಗೂ ಬೇಲೆಕೆರೆ ಬಂದರಿನ ಅಭಿವೃದ್ಧಿಯಿಂದ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಸಾಧ್ಯ. ಸದ್ಯ ಉತ್ತರ ಕರ್ನಾಟಕದಿಂದ ಏನೇ ಸಾಗಿಸಬೇಕೆಂದರೆ ಮರ್ಮಗೋವಾ ಹಾಗೂ ಬಾಂಬೆ ಬಂದರಿನ ಮೇಲೆ ಅವಲಂಭಿತವಾಗಿದೆ. ಬೆಂಗಳೂರಿನವರು ಮಂಗಳೂರಿನ ಬಂದರಿನ ಮೇಲೆ ಅವಲಂಭಿತರಾಗಿದ್ದರು ಆದರೆ ಈಗ ರಸ್ತೆಯ ಸಮಸ್ಯೆಯಿಂದಾಗಿ ಆಂದ್ರಪ್ರಧೇಶದ ಕೃಷ್ಣರಾಯಪಟ್ಟಣಂ ಬಂದರಿನ ಮೇಲೆ ಅವಲಂಭಿತರಾಗಿದ್ದಾರೆ. ಈ ಸಂದರ್ಭದಲ್ಲಿ ನಮ್ಮದೇ ರಾಜ್ಯದ ಬಂದರುಗಳ ಅಭಿವೃದ್ಧಿ ಅವಶ್ಯಕವಾಗಿದೆ. ಹುಬ್ಬಳ್ಳಿ–ಅಂಕೋಲ ಹಾಗೂ ಬೇಲಿಕೆರೆ ಯೋಜನೆಯಿಂದ ಉತ್ತರ ಕರ್ನಾಟಕ ಭಾಗದ ಜನರಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯದಾಗುತ್ತದೆ ಹಾಗೂ ಈ ಕನಸು ನನಸಾಗಬೇಕಾದರೆ ಎಲ್ಲರೂ ಕೈಜೋಡಿಸಬೇಕು ಎಂದು ತಿಳಿಸಿದರು.

ಮುಂದುವರೆಸುತ್ತ, ನಮ್ಮ ರಾಜ್ಯದ ಸ್ವತಂತ್ರ ಸಂಸ್ಥೆಯಾದ IISc ಬೆಂಗಳೂರು ರವರು ಪ್ರಸ್ತಾಪಿತ ಹುಬ್ಬಳ್ಳಿ–ಅಂಕೋಲ ರೈಲ್ವೆ ಮಾರ್ಗಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವೈಲ್ಡ್‌ಲೈಫ್ ಮಿಟಿಗೇಷನ್ ಮೇಷರ್ಸ್ ಒಳಗೊಂಡಂತೆ ಕಾರ್ಯಸಾಧ್ಯತೆ ವರದಿಯನ್ನು (feasibility report) ನೀಡಿರುತ್ತಾರೆ. ಅಂಕೋಲಕ್ಕೆ ಉತ್ತಮ ಸಂಪರ್ಕ ಕಲ್ಪಿಸುವ ಹುಬ್ಬಳ್ಳಿ–ಮಡಗಾಂವ ನಡುವೆ ಹಾಲಿ ಇರುವ ರೈಲ್ವೇ ಲೈನನ್ನು ದ್ವಿಗುಣಗೊಳಿಸುವುದರಿಂದ, ಈ ಯೋಜನೆಗೆ ಮಂಡಳಿಯ ಅನುಮೋದನೆ ನೀಡಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಅದಕ್ಕೆ ಮಾನ್ಯ ಸಚಿವರು ಪ್ರತಿಕ್ರಯಿಸುತ್ತಾ ಈ ರೈಲ್ವೇ ಮಾರ್ಗದಿಂದ ಅಂಕೋಲವನ್ನು ತಲುಪಲು ಕ್ರಮಿಸುವ ದೂರವು ಪ್ರಸ್ತಾಪಿತ ರೈಲ್ವೆ ಮಾರ್ಗಕ್ಕಿಂತ ಬಹಳ ಹೆಚ್ಚಾಗುತ್ತದೆಂದೂ ಮತ್ತು ಸದರಿ ಪರ್ಯಾಯ ಮಾರ್ಗವು ಉತ್ತರ ಕರ್ನಾಟಕದ ಬಿಜಾಪುರ, ಬೆಳಗಾವಿ, ಬಾಗಲಕೋಟೆ

ಭಾಗದವರಿಗೆ ಅನುಕೂಲ ಆಗುತ್ತದೆ ಎಂದು ತಿಳಿಸಿದರು. ಮುಂದುವರೆದು, ಸದರಿ ಯೋಜನೆಗೆ ಸಂಬಂಧಪಟ್ಟಂತೆ ಬೇಕಾಗಿರುವ ಯೋಜನೆಯ ಉದ್ದವನ್ನು 3.85 ಕಿ.ಮೀ. ನಷ್ಟು ಕಡಿಮೆಗೊಳಿಸಲಾಗಿದೆ, ಅರಣ್ಯ ಪ್ರದೇಶವನ್ನು 965 ಹೆ. ನಿಂದ 595 ಹೆ. ಪ್ರದೇಶಕ್ಕೆ ಕಡಿಮೆಗೊಳಿಸಲಾಗಿದೆ, ಒಟ್ಟು ಮರಗಳ ಕಟಾವಣೆಯನ್ನು 1,94,800 ರಿಂದ 1,57,000 ಕ್ಕೆ ಇಳಿಸಲಾಗಿದೆ, ಟನಲ್‌ಗಳ ಸಂಖ್ಯೆಯನ್ನು 29 ರಿಂದ 25 ಕ್ಕೆ ಇಳಿಸಲಾಗಿದೆಂದು ತಿಳಿಸಿದರು. ಕಾಡಾನೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ಮಿಟಿಗೇಷನ್ ಮೇಷರ್ಸ ಹಾಗೂ ಮುಂತಾದವುಗಳನ್ನು ಸದರಿ ವರದಿಯಲ್ಲಿ ನೀಡಲಾಗಿದೆ. ಸದರಿ ಯೋಜನೆಯ ಸ್ಥಳದಲ್ಲಿರುವ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳ ಸಂಖ್ಯೆ ಜಾಸ್ತಿ ಆಗಿದೆ ಮತ್ತು ಇಂಧನ ಬಳಕೆ ಕೂಡ ಅಧಿಕವಾಗಿದೆ. ಈ ಯೋಜನೆಯ ಅನುಷ್ಠಾನದಿಂದಾಗಿ ರೈಲ್ವೆ ಮುಖಾಂತರ ಸರಕು ಸಾಗಾಣಿಕೆಯಿಂದಾಗಿ ಗಣನೀಯ ಪ್ರಮಾಣದಲ್ಲಿ ಇಂಧನದ ಉಳಿತಾಯವಾಗುತ್ತದೆ. ಇದರಿಂದ ಬೇಲಿಕೇರೆ ಬಂದರಿಗೂ ಸಹ ನೇರ ಸಂಪರ್ಕ ದೊರಕಿದಂತಾಗುತ್ತದೆ. ಹುಬ್ಬಳ್ಳಿ–ಅಂಕೋಲ ರೈಲು ಮಾರ್ಗಕ್ಕೆ ಕೇಂದ್ರ ಸರ್ಕಾರದಿಂದ ಸಂಪೂರ್ಣ ಅನುದಾನ ದೊರೆಯಲಿದೆ. ರಾಜ್ಯ ಸರ್ಕಾರವು ಬರೀ ಜಾಗವನ್ನು ವಶಪಡಿಸಿಕೊಂಡು ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಯನ್ನು ಅನುಮೋದಿಸಬೇಕೆಂದು ಸಭೆಯಲ್ಲಿ ವಿನಂತಿಸಿಕೊಂಡರು.

ನಂತರ ಸಭೆಗೆ ವಿಶೇಷವಾಗಿ ಆಗಮಿಸಿದ ಇನ್ನೋರ್ವ ಪ್ರಮುಖರಾದ, ಶ್ರೀ ಆರ್. ವಿ. ದೇಶಪಾಂಡೆ, ಮಾಜಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ಹಾಲಿ ವಿಧಾನ ಸಭಾ ಸದಸ್ಯರು ಇವರು ಸಭಾಧ್ಯಕ್ಷರಿಗೆ ಹಾಗೂ ಎಲ್ಲರಿಗೂ ವಂದಿಸಿ ಮಾತನಾಡುತ್ತ, ಅವರು ಈ ಸಮಿತಿಯ ಸದಸ್ಯನಲ್ಲದಿದ್ದರೂ ಆ ಭಾಗಕ್ಕೆ ಸೇರಿದವನಾಗಿರುವುದರಿಂದ ಅವರ ಅನಿಸಿಕೆಯನ್ನು ಹಂಚಿಕೊಳ್ಳಲು ಬಂದಿದ್ದಾರೆಂದು ತಿಳಿಸಿದರು.. ಅವರೂ ಸಹ ಪರಿಸರವಾದಿಗಳ ಜೊತೆ ಹಾಗೂ ಜನಪ್ರತಿನಿಧಿಗಳ ಜೊತೆ ಮಾತನಾಡಿದ್ದಾರೆಂದು, ಸುಮಾರು 50 ವರ್ಷದಿಂದ ಅವರು ಉತ್ತರ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವುದಾಗಿ ತಿಳಿಸಿದರು. ಈ ಯೋಜನೆ ಯಾವಾಗ ಜಾರಿಗೆ ಬರುತ್ತೆ ಅಂತ ಉತ್ತರ ಕನ್ನಡ ಜನ ಕಾಯುತ್ತಿದ್ದಾರೆ. ಪ್ರಾಜೆಕ್ಟ್ ಸೀಬರ್ಡ್, ಕೈಗಾ ಯೋಜನೆ, ಕಾಳಿ ನದಿಗೆ ಸಂಬಂಧಿಸಿದಂತೆ ಕದ್ರಾ ಕೊಡಸಳ್ಳಿ ಯೋಜನೆಗಳು ಬಂದಾಗಾ ಜನರು ಆರಂಭದಲ್ಲಿ ಬಹಳವಾಗಿ ವಿರೋದಿಸಿದ್ದರು. ಆದರೆ ರಾಷ್ಟ್ರದ ಹಿತವನ್ನು ಗಮನದಲ್ಲಿರಿಸಿಕೊಂಡು ಯೋಜನೆಗಳಿಗೆ ಬೆಂಬಲ ನೀಡಲಾಯಿತು. ಉತ್ತರ ಕನ್ನಡದಲ್ಲಿ ಅರಣ್ಯವನ್ನು ಹೇರಳವಾಗಿ ರಕ್ಷಿಸಲಾಗಿದೆ ಆದುದರಿಂದ ಈ ಜಿಲ್ಲೆಯಲ್ಲಿ ಅಭಿವೃದ್ದಿಯನ್ನು ವಿರೋಧಿಸುವುದು ಸರಿಯಲ್ಲವೆಂದು ತಿಳಿಸಿದರು. ಅಲ್ಲದೇ 2019 ಅರಣ್ಯ ಸಮೀಕ್ಷೆ (FSI) ಯನ್ವಯ ಕರ್ನಾಟಕ ರಾಜ್ಯದಲ್ಲಿ ಹಸಿರೀಕರಣ ಅತ್ಯಧಿಕವಾಗಿ ಹೆಚ್ಚಾಗಿದೆ. ಅಲ್ಲದೇ ಧಾರವಾಡ ಜಿಲ್ಲೆಯ 255 ಹೆ. ಅರಣ್ಯೇತರ ಪ್ರದೇಶವನ್ನು ಈಗಾಗಲೇ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಈ ಯೋಜನೆಗಾಗಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆಯ ಅವಶ್ಯಕತೆ ಇದೆ. ಸದರಿ ಯೋಜನೆಗೆ ಉಪಯೋಗಿಸುವ ಅರಣ್ಯ ಪ್ರದೇಶದ ಬದಲಾಗಿ ಅದಕ್ಕಿಂತ ದುಪ್ಪಟ್ಟು ಅರಣ್ಯ ಪ್ರದೇಶವನ್ನು ಅರಣ್ಯೀಕರಣಕ್ಕಾಗಿ ಬಳಸಬಹುದು. ಅಲ್ಲದೇ ಅರಣ್ಯೀಕರಣಕ್ಕಾಗಿ ಕಂದಾಯ ಇಲಾಖೆಯ ಜಮೀನನ್ನು ಉಪಯೋಗಿಸಿಕೊಳ್ಳಬಹುದು ಎಂದು ತಿಳಿಸಿದರು. ಗಣಿಗಾರಿಕೆಯಿಂದಾಗಿ ದಿನಕ್ಕೆ ಸಾವಿರಾರು ಟ್ರಕ್‌ಗಳು ಸಂಚರಿಸುತ್ತಿದ್ದು, ಇದರಿಂದ ವನ್ಯಜೀವಿ, ಮಾನವರಿಗೆ ಹಾಗೂ ಜಾನುವಾರುಗಳಿಗೆ ತೊಂದರೆಯಾಗುತ್ತದೆ. ಈ ಯೋಜನೆಯು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಅವಶ್ಯಕವಾಗಿದೆ. ಕಾರವಾರವು ದೇಶದಲ್ಲೇ ಅತ್ಯುತ್ತಮ ಬಂದರಾಗಿದ್ದು ಇದೊಂದು ನೈಸರ್ಗಿಕ ಬಂದರಾಗಿದೆ ಎಂದು ತಿಳಿಸಿದರು. ಅಲ್ಲದೇ IISc ರವರು ಇವೆಲ್ಲವುಗಳಿಗೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ನಿಷ್ಪಕ್ಷಪಾತದಿಂದ ನೀಡಿರುತ್ತಾರೆ. ಪ್ರತಿ ವರ್ಷ ಸರ್ಕಾರದ ಖರ್ಚು ಹೆಚ್ಚು ಆಗುತ್ತಿದೆ ಆದರೆ ಒಟ್ಟಾರೆ ಆದಾಯಗಳು ಕಡಿಮೆ ಆಗುತ್ತಿದೆ. ಹಾಗಾಗಿ ಕೈಗಾರಿಕೆಗಳ ಸ್ಥಾಪನೆ ಹಾಗೂ ಅವುಗಳ ಬೆಳವಣಿಗೆ ಅವಶ್ಯಕವಾಗಿದೆ. ಕಾರವಾರ ಬಂದರು ಉತ್ತರ ಕರ್ನಾಟಕ ರೈಲ್ವೆ ನೆಟ್‌ವರ್ಕ್‌ಗೆ ಸೇರ್ಪಡೆಯಾದರೆ ಉತ್ತರ ಕರ್ನಾಟಕದ ಜನರಿಗೆ ಉಪಯೋಗವಾದಂತಾಗುತ್ತದೆ ಎಂದು ತಿಳಿಸಿ ಸದರಿ ಯೋಜನೆಯನ್ನು ಅನುಮೋದಿಸುವಂತೆ ಸಭೆಯಲ್ಲಿ ವಿನಂತಿಸಿಕೊಂಡರು.

ಮಂಡಳಿಯ ಸದಸ್ಯರಾದ ಶ್ರೀ ಸಂಜಯ್ ಗುಬ್ಬಿ ರವರು ಸಭೆಗೆ ನಮಿಸಿ ಮಾತನಾಡುತ್ತಾ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಕಾನೂನಾತ್ಮಕವಾಗಿ ಸರಿ ಇಲ್ಲ. ಏಕೆಂದರೆ ಐಐಎಸ್‌ಸಿ (IISc) ಸಂಸ್ಥೆ ಅಕ್ಟೋಬರ್ 2013 ರಲ್ಲಿ ಮಿಟಿಗೇಶನ್ ಮೇಷರ್ಸ್ ರಿಪೋರ್ಟ್ ಅನ್ನು ತಯಾರಿ ಮಾಡಿರುವುದಾಗಿದ್ದು, ಫೆಬ್ರವರಿ 2016 ರಲ್ಲಿ ರಾಷ್ಟ್ರೀಯ ಹಸಿರು ಪ್ರಾಧಿಕಾರ, ದೆಹಲಿ (NGT) ರವರು ಉಪಯೋಗಿ ಸಂಸ್ಥೆರವರಿಗೆ ಹೊಸದಾಗಿ ವರದಿಯನ್ನು ಸಿದ್ಧ ಪಡಿಸಲು ನಿರ್ದೇಶಿಸಿದ ಮೇರೆಗೆ ಸದರಿ ವರದಿಯು ಪ್ರಸ್ತುತ ಶೂನ್ಯ ಮತ್ತು ಅನುರ್ಜಿತ (null and void) ಆಗುತ್ತದೆಂದು ತಿಳಿಸಿದರು. ಆದಕಾರಣ ಸದರಿ ಯೋಜನೆಗೆ ಒಪ್ಪಿಗೆ ನೀಡಿದ ನಂತರ ಯಾರಾದರು ಕೋರ್ಟಿಗೆ ಹೋದರೆ ಸದರಿ ಯೋಜನೆಯನ್ನು ಮಾನ್ಯತೆ ಮಾಡುವುದಿಲ್ಲ. ಅಲ್ಲದೇ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ದಿನಾಂಕ 05–12–2017 ರ ಸುತ್ತೋಲೆಯನ್ವಯ "ಒಂದು ಸಂರಕ್ಷಿತ ಪ್ರದೇಶ ಅಥವಾ ಹುಲಿ ಸಂರಕ್ಷಿತ ಪ್ರದೇಶವನ್ನು ಮತ್ತೊಂದು ಸಂರಕ್ಷಿತ ಪ್ರದೇಶ / ಹುಲಿ ಸಂರಕ್ಷಿತ ಪ್ರದೇಶದೊಂದಿಗೆ ಸಂಪರ್ಕಿಸುವ ಪ್ರದೇಶಗಳ ಮೂಲಕ ಹಾದುಹೋಗುವ ರೈಲ್ವೆ ಯೋಜನೆಗಳಿಗೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 38 (ಒ) (1) (ಜಿ) ಅನ್ವಯ ರಾಷ್ಟೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (NTCA) ಸಲಹೆಯ ಮೇರೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಸಾರ್ವಜನಿಕ ಹಿತಾಸಕ್ತಿಯನ್ನು ಹೊರತುಪಡಿಸಿ ಶಿಫಾರಸ್ಸು ಮಾಡುವಂತಿಲ್ಲ". ಅಲ್ಲದೇ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು (NTCA) ಸಹ ಈ ಯೋಜನೆಯನ್ನು 2018 ರಲ್ಲಿ ತಿರಸ್ಕರಿಸಿರುತ್ತದೆ. ರಾಷ್ಟ್ರೀಯ ಹಸಿರು ಪ್ರಾಧಿಕಾರ (NGT) ತಿರಸ್ಕರಿಸಿರುವುದರಿಂದ ಕಾನೂನಾತ್ಮಕವಾಗಿ ಸದರಿ ಯೋಜನೆಯನ್ನು ಕೈಬಿಡುವುದು ಒಳಿತು. ಇದಲ್ಲದೇ ಪಶ್ಚಿಮ ಘಟ್ಟದ ಸಾಲಿನಲ್ಲೇ ಬರುವ ಕೊಡಗು ಹಾಗೂ ಕೇರಳದಲ್ಲಿ ಭೂಕುಸಿತ (landslides) ಮತ್ತು ಅತಿವೃಷ್ಟಿಯು ತಮ್ಮೆಲ್ಲರ ಗಮನಕ್ಕೆ ಈಗಾಗಲೇ ಬಂದಿದೆ. ಆದ್ದರಿಂದ ಸದರಿ ಯೋಜನೆಯನ್ನು ತಿರಸ್ಕರಿಸುವಂತೆ ಮನವಿ ಮಾಡಿದರು.

ಮಂಡಳಿಯ ಸದಸ್ಯರಾದ ಶ್ರೀ ಮಲ್ಲೇಶಪ್ಪ ರವರು ಸಭೆಗೆ ನಮಿಸಿ ಮಾತನಾಡುತ್ತ ಸದರಿ ಪ್ರಸ್ತಾಪಿತ ಯೋಜನೆಗಾಗಿ ಐಐಎಸ್‌ಸಿ (IISc) ಸಂಸ್ಥೆರವರು ತಯಾರಿಸಿರುವ ವರದಿಯು ಅವೈಜ್ಞಾನಿಕವಾಗಿದ್ದು, ಅರಣ್ಯ ಇಲಾಖೆಯೊಂದಿಗೆ ಸರಿಯಾದ ಸಮಾಲೋಚನೆ ನಡೆಸಿರುವುದಿಲ್ಲವೆಂದು ತಿಳಿಸಿದರು. ಅದಲ್ಲದೇ ಸದರಿ ಯೋಜನೆಯ ಬಗ್ಗೆ ಈಗಾಗಲೇ 13 ನೇ ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಕೂಲಂಕುಷವಾಗಿ ಚರ್ಚೆ ಮಾಡಿದ್ದೀವಿ. ಈಗಾಗಲೇ ಎರಡು ಸಲ ಚರ್ಚೆ ಆಗಿ ತಿರಸ್ಕರಿಸಲಾಗಿದ್ದಾಗ್ಯೂ ಪುನ: ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು. ಪಶ್ಚಿಮ ಘಟ್ಟದ ಸಾಲಿನಲ್ಲಿ ಬರುವ ಕೊಡಗಿನಲ್ಲಿ, ಚಿಕ್ಕಮಗಳೂರಿನ ಚಾರ್ಮಾಡಿ ಘಾಟನಲ್ಲಿ ಪ್ರಕೃತಿ ವಿಕೋಪಗಳು ಅರಣ್ಯ ನಾಶದಿಂದ ಉಂಟಾಗಿದೆ ಎಂದು ಹೇಳಿದರು. ಈ ಯೋಜನೆಯ ಬದಲಿಗೆ ಕಲ್ಪಿಸಲಾದ ಮಾರ್ಗದಲ್ಲಿ ಅಂಕೋಲ ತಲುಪಲು ಕೇವಲ ಒಂದೂವರೆ ಘಂಟೆ ಮಾತ್ರ ಹೆಚ್ಚಾಗುವುದೆಂದು ತಿಳಿಸಿದರು. ಆದ್ದರಿಂದ ರೈಲ್ವೆ ಲೈನಿಗಾಗಿ ಪ್ರಶಸ್ತವಾದ ಪಶ್ಚಿಮ ಘಟ್ಟವನ್ನು ಹಾಳು ಮಾಡುವುದು ಸರಿಯಲ್ಲವೆಂದು ತಿಳಿಸಿದರು. ಆದಕಾರಣ ಸದರಿ ಯೋಜನೆಗೆ ಅನುಮತಿ ನೀಡುವ ಮೊದಲೇ ತಾವುಗಳು ಖುದ್ದಾಗಿ ಒಂದು arial survey ಕೈಗೊಂಡು ನಂತರ ಸಾಧಕ–ಭಾದಕಗಳನ್ನು ವಿಶ್ಲೇಷಿಸಿ ನಿರ್ಧಾರ ಕೈಗೊಳ್ಳುವಂತೆ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಸಿಕೊಂಡರು.

ಮಂಡಳಿಯ ಸದಸ್ಯರಾದ ಡಾ ಎನ್. ಸಿ. ಶಿವಪ್ರಕಾಶರವರು ಸಭೆಗೆ ನಮಿಸಿ ಮಾತನಾಡುತ್ತಾ, ಪ್ರಸ್ತಾಪಿತ ಯೋಜನೆಯ ಪ್ರದೇಶವು ಜಗತ್ತಿನ ಅಪರೂಪದ ಜೀವ ವೈವಿದ್ಯ ತಾಣಗಳಲ್ಲಿ ಒಂದಾದ ಪಶ್ಚಿಮ ಘಟ್ಟದಲ್ಲಿ ಬರುತ್ತಿದ್ದು ಇದು ಅನೇಕ ವನ್ಯಪ್ರಾಣಿಗಳ ಆವಾಸ ಸ್ಥಾನವಾಗಿರುವುದಾಗಿಯೂ ಅವುಗಳಲ್ಲಿ ಕೆಲವು ಸ್ಥಳೀಯ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆಂದು ಹಾಗೂ ಇದು ಅನೇಕ ಜೀವ ನದಿಗಳ ಆಗರವಾಗಿ, ಕರ್ನಾಟಕ ಜನರ ಜೀವನಾಡಿಯಾಗಿದೆಂದು ತಿಳಿಸಿದರು. ಸದರಿ ಯೋಜನೆಯನ್ನು ಕೈಗೊಂಡರೆ ಅವುಗಳ ಮೇಲೆ ಅಗಾಧ ಪ್ರಮಾಣದಲ್ಲಿ ಪ್ರಭಾವ ಬೀರುತ್ತದೆ. ಇದನ್ನು ತಪ್ಪಿಸಲು ಸದರಿ ಮಾರ್ಗಕ್ಕೆ ಬದಲಾಗಿ ಈಗಾಗಲೇ ಬೇರೊಂದು ಮಾರ್ಗ (ತಿನೈಘಾಟ್– ಕ್ಯಾಸಲ್‌ರಾಕ್–ಕಾರಂಜೋಲ್) ವನ್ನು ದ್ವಿಗುಣಗೊಳಿಸಿ ಬಲಪಡಿಸಲು ಹಿಂದಿನ ಮಂಡಳಿಯಲ್ಲಿ ಅನುಮತಿಸಲಾಗಿದೆ. ಐಐಎಸ್‌ಸಿ (IISc) ಸಂಸ್ಥೆಯು ಬೃಹತ್ ಯೋಜನೆಗಳಿಗೆ ವನ್ಯಜೀವಿ ಉಪಶಮನ ಮಾರ್ಗೋಪಾಯಗಳನ್ನು ಸೂಚಿಸುವಲ್ಲಿ ಪರಿಣಿತವಲ್ಲದ ಸಂಸ್ಥೆ

ಆಗಿರುವ ಕಾರಣ ಸದರಿ ಸಂಸ್ಥೆಯು ತಯಾರಿಸಿದ ವರದಿಯನ್ನು ಒಪ್ಪಿಕೊಳ್ಳಲು ಬರುವುದಿಲ್ಲ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಧಿಕಾರಸ್ಥ ಸಮಿತಿ (CEC) ಸಹ ಸದರಿ ವರದಿಯನ್ನು ತಿರಸ್ಕರಿಸಿರುತ್ತದೆ. ಅಲ್ಲದೇ ಕಾಡಿನ ನಾಶದಿಂದಾಗಿ ಪ್ರಕೃತಿಯ ನಾಶವು ಜಾಸ್ತಿಯೇ ಆಗುತ್ತಿದ್ದು, ಅಭಿವೃದ್ಧಿ ಹೆಸರಿನಲ್ಲಿ ಕಾಡುಗಳನ್ನು ನಾಶಮಾಡುವುದು ಸರಿಯಲ್ಲ. ಆದಕಾರಣ ಸಭಾಧ್ಯಕ್ಷರು ಒಮ್ಮೆ ಖುದ್ದಾಗಿ ಪ್ರಸ್ತಾಪಿತ ಪ್ರದೇಶವನ್ನು ಸರ್ವೇ ಮಾಡಿದ ನಂತರ ತೀರ್ಮಾನಕ್ಕೆ ಬರಬೇಕೆಂದು ವಿನಂತಿಸಿಕೊಂಡರು. ಮೈಸೂರಿನಲ್ಲಿರುವ ರೈಲ್ವೆ ಲೈನ್ ಅನ್ನು ಬ್ರಾಡ್‌ಗೇಜ್ ಮಾಡುವುದಕ್ಕೆ ಆರು ವರ್ಷ ತೆಗೆದುಕೊಂಡಿದ್ದು ಸದರಿ ಪ್ರಸ್ತಾಪಿತ ಯೋಜನೆಯು ಪೂರ್ಣಗೊಳ್ಳಲು ಕನಿಷ್ಟ 12 ರಿಂದ 15 ವರ್ಷಗಳು ಬೇಕಾಗುತ್ತದೆಂದು ಆತಂಕ ವ್ಯಕ್ತಪಡಿಸಿದರು. ದಿನನಿತ್ಯದ ಯಂತ್ರೋಪಕರಣಗಳ ಹಾಗೂ ನೌಕರರ ಓಡಾಟವು ಸುತ್ತಲಿನ ಅರಣ್ಯ ಪ್ರದೇಶಗಳ ಮೇಲೆ ಸದರಿ ಯೋಜನೆಗಿಂತಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆದುದರಿಂದ ಸದರಿ ಯೋಜನೆಯನ್ನು ಕೈಬಿಡುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.

ಮಂಡಳಿಯ ಸದಸ್ಯರಾದ ಶ್ರೀ ಅಪ್ಪಾಜಿಗೌಡ ಎನ್. ಬಿ. ರವರು ಮತನಾಡುತ್ತಾ, ಹುಬ್ಬಳ್ಳಿ – ಅಂಕೋಲಾ ರೈಲ್ವೆ ಮಾರ್ಗಕ್ಕೆ ಅನುಮತಿ ನೀಡುವ ಕುರಿತು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದೆ. ಈಗಾಗಲೇ ಸದರಿ ವಿಷಯದ ಬಗ್ಗೆ ಮಾನ್ಯ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್, ಮತ್ತು ಶಾಸಕರಾದ ಶ್ರೀ ಆರ್.ವಿ. ದೇಶಪಾಂಡೆ ರವರು ವಿವರವಾಗಿ ವಿವರಿಸಿದ್ದಾರೆ. ಅಂದಿನ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರು ಸದುದ್ದೇಶದಿಂದ ಸದರಿ ರೈಲ್ವೆ ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದಾರೆ. ಪ್ರಧಾನ ಮಂತ್ರಿಗಳು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅಧ್ಯಕ್ಷರಾಗಿದ್ದು, ಅಲ್ಲಿಯೂ ಈ ಬಗ್ಗೆ ಚರ್ಚೆಯಾಗುತ್ತದೆ. ಆದುದರಿಂದ ಕಾನೂನಿನ ತೊಡಕುಗಳನ್ನು ಪರಿಹರಿಸಿಕೊಂಡು ಉತ್ತರ ಕರ್ನಾಟಕದ ಅಭಿವೃದ್ಧಿ ಹಿತದೃಷ್ಟಿಯಿಂದ ಯೋಜನೆಗೆ ಅನುಮತಿ ನೀಡುವಂತೆ ಕೋರಿದರು.

ಮುಖ್ಯ ಕಾರ್ಯದರ್ಶಿಯವರು ಪರಿಸರ ಮತ್ತು ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆ ಒತ್ತಿಹೇಳುತ್ತಾ, ಪ್ರಸ್ತಾಪಿತ ಯೋಜನೆಯ ಪ್ರದೇಶವು ಹುಲಿ ಸಂರಕ್ಷಿತ ಪ್ರದೇಶವಾಗಿರುವುದಿಲ್ಲ. ಆದುದರಿಂದ, ಉಪಶಮನ ಕ್ರಮಗಳನ್ನು (Mitigation Plan) ಕೈಗೊಂಡು ಈ ಯೋಜನೆಗೆ ಅನುಮತಿಸಬಹುದು. ಎಲ್ಲರೂ ಕರ್ನಾಟಕದ ಪರಿಸರ ಸಂರಕ್ಷಿಸಬೇಕು, ಪಶ್ಚಿಮ ಘಟ್ಟವನ್ನು ಸಂರಕ್ಷಣೆ ಮಾಡಬೇಕು. ಸದರಿ ಯೋಜನೆಯು ಉತ್ತರ ಕರ್ನಾಟಕದ ಜನರ ಬಹುದಿನಗಳ ಕನಸು ಹಾಗೂ ಹಲವಾರು ವರ್ಷಗಳಿಂದ ಈ ವಿಷಯವು ಚರ್ಚೆಯಾಗುತ್ತಿದೆ. ಬಹುದಿನಗಳ ಕನಸು ನನಸಾಗುವುದಕ್ಕೆ ಇದು ಒಂದು ಅವಕಾಶವೆಂದು ತಿಳಿಸಿದರು. ಆದುದರಿಂದ, ಈ ಯೋಜನೆಯನ್ನು ಶಿಫಾರಸ್ಸು ಮಾಡುವಂತೆ ಕೋರಿದರು.

ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ಮಾತನಾಡುತ್ತಾ, ಈ ಸಭೆಯಲ್ಲಿ ನಮ್ಮ ಇಲಾಖೆಯ ಸಚಿವರು ಹಾಜರಿರುವುದಿಲ್ಲ, ದಿನಾಂಕ: 9ನೇ ಮಾರ್ಚಿನಲ್ಲಿ ನಡೆದ ಹಿಂದಿನ ಸಭೆಯಲ್ಲಿ ಅವರು ಈ ಯೋಜನೆಯು ಅರಣ್ಯ ಮತ್ತು ಪಶ್ಚಿಮಘಟ್ಟಕ್ಕೆ ಹಾನಿಕಾರಕವಾಗಿದೆಯೆಂಬ ಅಭಿಪ್ರಾಯದಿಂದಾಗಿ ಯೋಜನೆಯನ್ನು ಕೈಬಿಡುವಂತೆ ಕೋರಿದ್ದರೆಂದು ತಿಳಿಸಿದರು. ಆದ ಕಾರಣ ಸದರಿ ವಿಷಯವಾಗಿ ಅರಣ್ಯ ಇಲಾಖೆಯ ಸಚಿವರೊಂದಿಗೆ ತಾವು ಚರ್ಚೆಮಾಡಿ ತೀರ್ಮಾನ ಕೈಗೊಳ್ಳುವಂತೆ ಮನವಿ ಮಾಡಿದರು. ಮುಂದುವರೆಸುತ್ತ, ಅರಣ್ಯ ಇಲಾಖೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗಳು ಕರ್ನಾಟಕ ಸರ್ಕಾರದ ಭಾಗವಾಗಿದ್ದಾಗ್ಯೂ ಎರಡೂ ಇಲಾಖೆಗಳು ವಿಬಿನ್ನ ಅಭಿಪ್ರಾಯ ಹೊಂದಿರುವುದಾಗಿ ತಿಳಿಸಿದರು. ಸದರಿ ವಿಷಯದ ತೀರ್ಮಾನವನ್ನು ಮಾನ್ಯ ಅಧ್ಯಕ್ಷರ ವಿವೇಚನೆಗೆ ಬಿಟ್ಟು, ಅಧ್ಯಕ್ಷರು ಸದರಿ ವಿಷಯವನ್ನು ಸಚಿವ ಸಂಪುಟದಲ್ಲಿ ಚರ್ಚಿಸಬೇಕೇ ಅಥವಾ ಇಲ್ಲೇ ತೀರ್ಮಾನ ಕೈಗೊಳ್ಳಬೇಕೇ ಎಂಬುದರ ಬಗ್ಗೆ ನಿರ್ಧರಿಸಬಹುದು ಎಂಬ ಅಂಶವನ್ನು ಸಲ್ಲಿಸಿದರು.

ಮಂಡಳಿಯ ಸದಸ್ಯರಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡುತ್ತಾ, ಸಮಾಜ ಕಲ್ಯಾಣ ಇಲಾಖೆಯು ನಿರ್ದಿಷ್ಟ ಸಮುದಾಯ ಹಾಗೂ ಬುಡಕಟ್ಟು ಜನಾಂಗದ

ಪುನರ್ವಸತಿಯ ಬಗ್ಗೆ ಕಾಳಜಿ ಹೊಂದಿರುವುದಾಗಿ ತಿಳಿಸಿದರು. ಉತ್ತರ ಕರ್ನಾಟಕದ ಆರ್ಥಿಕತೆನ್ನು ವೃದ್ದಿಗೊಳಿಸುವ ದೃಷ್ಟಿಯಿಂದ ಸದರಿ ಯೋಜನೆಯನ್ನು ಶಿಫಾರಸ್ಸು ಮಾಡಲು ಮಂಡಳಿಯ ಅಧ್ಯಕ್ಷರಲ್ಲಿ ವಿನಂತಿಸಿಕೊಂಡರು.

ಮುಖ್ಯ ವನ್ಯಜೀವಿ ಪಾರಿಪಾಲಕರು ಮತ್ತು ಸದಸ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ಯೋಜನೆಗಾಗಿ ಭಾರತೀಯ ವಿಜ್ಞಾನ ಸಂಸ್ಥೆಯವರು ತಯಾರಿಸಿರುವ ವರದಿಯು ಪ್ರಾಯೋಗಿಕವಾಗಿಲ್ಲವೆಂದು ಅಲ್ಲದೇ, ವರದಿ ತಯಾರಿಸುವ ಸಂಧರ್ಬದಲ್ಲಿ ತಜ್ಞರ ತಂಡದಲ್ಲಿ ಅರಣ್ಯಾಧಿಕಾರಿಗಳು ಇರಲಿಲ್ಲವೆಂದು ತಿಳಿಸಿದರು. ಮುಂದುವರೆದು, ಮುಖ್ಯ ವನ್ಯಜೀವಿ ಪರಿಪಾಲಕರ ಸಮಾಲೋಚನೆ ನಡೆಸದೇ ವರದಿಯನ್ನು ತಯಾರಿಸಿದ್ದು, ಸುಮಾರು ವರ್ಷಗಳೇ ಕಳೆದಿದ್ದರೂ ಈವರೆವಿಗೂ ನಮ್ಮ ಅರಣ್ಯ ಇಲಾಖೆಗೆ ಪ್ರತಿಯನ್ನೂ ಸಲ್ಲಿಸಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್ ರವರು ಮಾತನಾಡುತ್ತಾ, ಭಾರತೀಯ ವಿಜ್ಞಾನ ಸಂಸ್ಥೆಯು ಭಾರತದಲ್ಲಿ ಗೌರವಾನ್ವಿತ ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಸದರಿ ಸಂಸ್ಥೆ ವರದಿಯನ್ನು ತಯಾರಿಸುವಾಗ ಪರಿಸರವಾದಿಗಳ ಜೊತೆ ಹಾಗೂ ವನ್ಯಜೀವಿ ಕಾಳಜಿ ಇರುವವರ ಜೊತೆ ಚರ್ಚಿಸಿ, ಸೂಕ್ತ ಪರಿಹಾರ ಕ್ರಮಗಳನ್ನು ಅಳವಡಿಸಲಾಗಿದ್ದು, ಸದರಿ ಯೋಜನೆಯನ್ನು ಅನುಮೋದಿಸುವಂತೆ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿದರು. ಮುಂದುವರೆಸುತ್ತ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಪ್ರಸ್ತಾವನೆಯನ್ನು ಪರಿಶೀಲನೆ ಮಾಡದೇ ಅನುಮೋದಿಸುವುದಿಲ್ಲ ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿಯವರು ಮಂಡಳಿಯ ಸದಸ್ಯರ ಕಾಳಜಿಗಳನ್ನು ಗಮನದಲ್ಲಿಟ್ಟು ಮಾತನಾಡುತ್ತಾ, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ವರದಿಯನ್ನು 2013 ರಲ್ಲಿ ತಯಾರಿಸಿದ್ದರು ಪ್ರಸ್ತಾಪಿತ ಪ್ರದೇಶದಲ್ಲಿ ವಾಸ್ತಾವಿಕವಾಗಿ ಯಾವುದೇ ಬದಲಾವಣೆಯಾಗಿರುವುದಿಲ್ಲ ಮತ್ತು 2013 ರಲ್ಲಿ ಯಾವ ಅರಣ್ಯ ಇತ್ತೊ ಅದೇ ಅರಣ್ಯ ಇದೆ. ಆದ್ದರಿಂದ ವರದಿಯು ಇವತ್ತಿಗೂ ಪ್ರಸ್ತುತ ಎಂದು ತಿಳಿಸಿದರು. ಯೋಜನೆಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಪರಿಸರ ಹಾನಿಯನ್ನು ತಪ್ಪಿಸುವ ದೃಷ್ಟಿಯಿಂದ ರೈಲ್ವೆ ಲೈನಿನ ಕೆಲಸಗಾರರು ಅರಣ್ಯ ಪ್ರದೇಶದಿಂದ ದೂರವಿರುವ ಹತ್ತಿರದ ಗ್ರಾಮಗಳಲ್ಲಿ ಕಡ್ಡಾಯವಾಗಿ ವಾಸವಿರಬೇಕೆಂದೂ ತಿಳಿಸಿದರು. ಮುಂದುವರೆಸುತ್ತ, ರಾಜ್ಯ ವನ್ಯಜೀವಿ ಮಂಡಳಿಯ ಶಿಫಾರಸ್ಸಿನಿಂದ ಕಳುಹಿಸಿದ ಪ್ರಸ್ತಾವನೆಯು ರಾಷ್ಟ್ರೀಯ ವನ್ಯಜೀವಿ ಮಂಡಳಿಯಲ್ಲಿ ಚರ್ಚೆಯಾಗುತ್ತದೆ. ಆ ಮಂಡಳಿಯೂ ಎಲ್ಲ ಕ್ಷೇತ್ರದ ತಜ್ಞರನ್ನು ಒಳಗೊಂಡಿದ್ದು, ಯೋಜನೆಗೆ ಅನುಮೋದಿಸುವ ಮುನ್ನ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸುತ್ತಾ, ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಸಲ್ಲಿಸುವಂತೆ ಕೋರಿದರು.

ಮೇಲ್ಕಂಡ ಎಲ್ಲ ಚರ್ಚೆಗಳ ನಂತರ ಮಂಡಳಿಯ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಯವರು ಹಿಂದುಳಿದ ಉತ್ತರ ಕರ್ನಾಟಕದ ಅಭಿವೃದ್ಧಿ ಹಾಗೂ ಅಲ್ಲಿ ವಾಸಿಸುತ್ತಿರುವ ಜನರ ಆಶಯವು ಪ್ರಮುಖವೆಂದು ಅಭಿಪ್ರಾಯ ಪಡುತ್ತಾ ಯೋಜನಾ ಅನುಷ್ಟಾನದ ಸಂದರ್ಭದಲ್ಲಿ ಎಲ್ಲ ಅವಶ್ಯ ಮಿಟಿಗೇಷನ್ ಮೆಷರ್ಸ್‌ಗಳನ್ನು ಕೈಗೊಳ್ಳಬೇಕೆಂದು ಮತ್ತು ಯೋಜನೆಯನ್ನು ಶಿಫಾರಸ್ಸು ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರು.

ಮಂಡಳಿಯು ಯೋಜನೆಯನ್ನು ಶಿಫಾರಸ್ಸು ಮಾಡಿ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕಳುಹಿಸಲು ನಿರ್ಣಯಿಸಿತು.

ಮಂಡಳಿಯ ಅಧ್ಯಕ್ಷರಿಗೆ ವಂದನಾರ್ಪಣೆ ಮಾಡುವ ಮೂಲಕ 14 ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬಿ.ಎಸ್. ಯಡಿಯೂರಪ್ಪ

**(ಬಿ.ಎಸ್. ಯಡಿಯೂರಪ್ಪ)**

**ಅಧ್ಯಕ್ಷರು, ರಾಜ್ಯ ವನ್ಯಜೀವಿ ಮಂಡಳಿ ಹಾಗೂ**

**ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ.**

**Proceedings of the 14th State Board for Wildlife held at Committee Room, 3rd floor, Vidhana Soudha under the Chairmanship of Hon'ble Chief Minister at 02.15 PM on 20.03.2020**

**Presence:**

**Sriyuths,**

| | | |
|---|---|---|
| 1. | Shri. B S Yediyurappa, Hon'ble Chief Minister, Government of Karnataka, Bengaluru. | Chairman |
| 2. | Ms. Soumya Reddy, Hon'ble MLA, Jayanagar Assembly Constituency | Member |
| 3. | Shri. M Ashwin Kumar, Hon'ble MLA, T. Narasipura Assembly Constituency. | Member |
| 4. | Shri. Appajigouda. N. Hon'ble MLA, Bengaluru. | Member |
| 5. | Dr. Sandeep Dave, IAS, Addl. Chief Secretary to Govt, GOK, Bengaluru. | Member |
| 6. | Shri. Punati Sridhar, IFS, Principal Chief Conservator of Forests (HoFF), Bengaluru. | Member |
| 7. | Shri. Kumar Naik, IAS, Principal Secretary to Govt., Social Welfare Department, Bengaluru. | Member |
| 8. | Dr. Ravindranath, IPS, ADGP, Forest Cell, Bengaluru | Member |
| 9. | Shri. Kumar Pushkar, IFS, Managing Director, Karnataka State Tourism Development Corporation, Bengaluru | Member |
| 10. | Director, Fisheries Department, Bengaluru | Member |
| 11. | Director, Department of Animal Husbandry & Veterinary Services. | Member |
| 12. | Dr. N.C. Shivaprakash, Professor, Adichunchanagiri Institute of Medical Science, Mysore. | Member |
| 13. | Shri. Malleshappa, Chairman, Swami Vivekananda Seva Trust (R), Chamarajanagar | Member |
| 14. | Shri. Sanjay Gubbi, 2208/B, Sadana Road, K.R. Extension, Tumkur-572101. | Member |
| 15. | Shri. Alok Vishwanath, Singanayakanahalli, Bengaluru-560064. | Member |
| 16. | Shri. Naveen J.S. No 20, 2nd Floor, above Raymond showroom, DVG road, Basavanagudi, Bengaluru. | Member |
| 17. | Shri. Chetan B, No 151, R L Jalappa College road, Kodigehalli, Doddaballapura, Bengaluru -561203. | Member |
| 18. | Shri. Sanjai Mohan, IFS, Principal Chief Conservator of Forests (Wildlife) & Chief Wildlife Warden, Bengaluru. | Member Secretary |

**Leave of absence:**

1) Shri. Anand Singh, Hon'ble Minister for Forests, Environment and Forests, Karnataka.
2) Shri. Rana George, M/s Kelachandra Group of Companies, No 16, Saint Marks Road, Bengaluru.
3) Shri. Dinesh Singhi, Pride Elite 10, Museum road, Bangaluru-560001.
   (E-mailed not to recommend the project. Copy attached)
4) Shri. Ajay A Desai, BC 84 Camp, Belgaum.
   (E-mailed not to recommend the project. Copy attached)

**Special Invitees:**

1) Shri. Jagadish Shettar, Hon'ble Minister of Large and Medium Scale Industries excluding Sugar and Minister of Public Enterprise Department, Government of Karnataka.
2. Shri. Shivaram Hebbar, Hon'ble Minister of Labour and Minister of Sugar Government of Karnataka.
3. Shri. R V. Deshpande, MLA, Haliyal Assembly constituency and former Minister for Large and Medium Scale Industries.
4. Shri. T. M. Vijay Bhaskar, IAS, Chief Secretary, GOK, Bengaluru.
5. Shri. Subhash K. Malkede, IFS, Addl. Principal Chief Conservator of Forests (Wildlife), Bengaluru.
6. Shri. G.V. Ranga Rao, IFS, Addl. Principal Chief Conservator of Forests, (Project Elephant), Bengaluru.

The Additional Principal Chief Conservation Forests (Wildlife) welcomed the Hon'ble Chief Minister and all members of the Board for the 14th State Wildlife Board meeting.

The Principal Chief Conservator of Forest (Wildlife) & Chief Wildlife Warden and Member Secretary of the Board informed the Board that inthe 13th meeting of the Board that had taken place on 09th of March 2020, the Board has approved seven proposals, but when the draft proceedings were submitted to the Hon'ble Chairman for approval and signature, it was returned with a direction to convene another Board meeting on 20.03.2020 to re-discuss the Hubli-Ankola Railway Project. Accordingly, the 14th meeting of the State Board for Wildlife has been convened.

Hon'ble Chief Ministerand Chairman of the Board said that the Agenda of Hubli-Ankola Railway project was elaborately discussed in the last meeting. He said that it has been brought to his notice that the Railway Department has reduced the forest area required for the project and also reduced total number of trees to be extracted. As this project is an important aspiration of the backward region of North Karnataka, the meeting was called to hear the views of all stake holders.

Shri Jagadish Shettar, Hon'ble Minister of Large and Medium Scale Industries, Government of Karnataka who attended the meeting as a Special invitee, informed about the forest land diversion to construct a New Broad Gauge railway line between Hubli and Ankola. He informed the Board that the then Prime Minister of India Shri Atal Bihari Vajpayee had laid the foundation of this railway line during his visit to Yellapur, Sirsi. This project is necessary because when the development of an area is to be considered, one has to give importance for infrastructure related projects. The Hubli-Ankola Railway line is a dream for the people of North Karnataka and now it has to come true. He thanked the Chairman of the Board for giving an opportunity to put forth his views on the project as the Minister of Large and Medium Scale Industries of Karnataka and said development in Karnataka is Bangalore centric and Karnataka needs to develop *Tier-II* industrial hubs. Recently "Invest in Karnataka" Conference was held at Hubli by the Department of Industry and Commerce of the Government of Karnataka and a demand for Hubli-Ankola line and development of Belekere port was made. Hubli-Ankola rail line and development of Belekere port will enable a holistic development of Northern Karnataka. Presently, Northern Karnataka is dependent on the port of Marmagao and Mumbai. Earlier Bengaluru relied on Mangalore port but now on Krishnapattanam port of Andhra Pradesh due to connectivity issues. In the present scenario, the development of our own ports is essential and said that the Hubli-Ankola and Belekere project would be good for the people of North Karnataka and the dream will come true if everyone join hands.

Further, he said that the Indian Institute of Science, (IISc) Bengaluru, an independent institute, had studied the proposed Hubli-Ankola railway line and has submitted feasibility report with mitigation Measures for Wildlife. Regarding Board's approval for doubling of Hubli to Madgaon existing line with connectivity to Ankola, the

Hon'ble Minister told the Board that the distance covered to reach Ankola by this route would be more than the proposed new rail line and this route will benefit Bijapur, Belgaum, Koppal and Bagalkot districts of Northern Karnataka. He further stated that the total length of project is reduced by 3.85 km, the extent of forest are required is reduced from 965 Ha to 595 ha, forest trees to be felled have been reduced from 194800 to 157000 and tunnels have been reduced from29 to 25. The mitigation measures for elephant movement etc., are given in the report. The highway traffic on National Highway 63 has increased, resulting in increased accidents and increased fuel consumption. With the implementation of this project, transporting of goods by rail will save considerable amount of fuel. It also provides direct connectivity to Belekere port. The Hubli-Ankola railway line will be fully funded by the Central Government. The State Government has to acquire only land and hence, requested the Board to approve the project.

Shri R.V. Deshpande, ex- Minister of Large and Medium Scale Industries of Karnataka and Member of Legislative Assembly, Haliyal constituency, who attended the meeting as a Special inviteesaid that he has come to share his opinion though he is not a member of this Committee but belongs to the area where the project is proposed. He said that he had discussed with environmentalists and politicians and he has been representing Uttara Kannada district for almost 50 years. The people of Uttara Kannada are waiting for this project to be completed. People opposed the Project Sea Bird, Kaiga Project, Kadra and Kodsalli Projects on River Kali initially, but the projects were supported keeping the interests nation in mind. In Uttara Kannada district forests are abundant protected well, therefore it is not correct to oppose the development in district. According to the 2019 FSI Report, the State of Karnataka has recorded the highest increase in forest cover. 255 hectares of non forest land is already handed over to the Railway Department in Dharwad district. This project requires approval from the National Board for Wildlife. Double the forest area can be used for afforestation in lieu of the forest area utilised for the project. Lands from Revenue Department can also be used for afforestation. In the region, due to mining, thousands of trucks are travelling daily which disturbs the wildlife, human and cattle. This project is required for the development of North Karnataka. He said that Karwar is best port of the country as it is a natural harbour. The IISc, Bengaluru has provided a detailed report on all of these issues without any bias. Every year, government expenditure is increasing but

overall collection of revenue is less. Thus the establishment and development of industries is essential. He requested the Board to approve the project, stating that the connection of the Northern Karnataka Railway Network to Karwar would benefit the people of Northern Karnataka.

Shri Sanjay Gubbi, Member of the Board said that implementation of the project is not legally correct. The IISc, Bengaluru prepared the Mitigation Measures report in October 2013 and NGT Delhi in order in February 2016 has directed the user agency to submit fresh application and hence the report of IISc, becomes null and void. If anyone goes to the court after approval, it may invite the legal problems. Apart from this, as per the guidelines of the MoEF& CC dated: 5.12.2017, railway projects passing through the areas linking one Protected Area or Tiger Reserve with another Protected Area or Tiger Reserve, the approval of NBWL on the advice of NTCA as provided under Sec.38 (0) (i) (g) of Wildlife (Protection) Act, 1972 is essential. The project is also rejected by the National Tiger Conservation Authority in 2018. It is legally correct to drop the project as it has been rejected by the National Green Tribunal. In addition, we all have already noticed the recent landslides and excessive rain in Kodagu and Kerala in the Western Ghats. He requested the Board to reject the project.

Shri Malleshappa, Member of the Board, said that the report prepared by IISc, Bengaluru for the proposed project is unscientific and proper discussion not held with the Forest Department. The project has already been discussed in the 13th State Board for Wildlife. It has already been rejected twice but once again the meeting is called. He further told that the recent natural calamities in Kodagu, Charmadi Ghat in Chikmagalur are because of destruction of forests. An alternative route is already available which increases the travel time to Ankola merely by an hour and a half. Therefore, destroying the prestigious Western Ghats for the sake of this rail line is not prudent. He also requested the Chair that before approving the project, an aerial survey may be taken up by the Hon'ble Chairman and final decision may be taken after analysing all the aspects.

Dr N. C. Shivaprakash, Member of the Board said the proposed project is coming up in the Western Ghats which is one of the mega biodiversity hot spots of the world and it is a home for many wildlife some of them endemic to the area. It is a place of origin of many rivers which are a life line to the people of Karnataka. The project will have a huge impact on them. Approval for doubling and strengthening of an alternate line (Tinnaighat- Castle rock –Caranzole) had already been accorded in the last meeting. IISc, Bengaluru is not an institute with an expertise in providing wildlife mitigation measures for such mega projects and it is not correct to accept the report prepared by it. The CEC of the Hon'ble Supreme Court had rejected the report. Also, the destruction of the forests is causing more and more damage to nature and deforestation in the name of development is not correct. He requested the Chairman to take decision after taking up a survey of the proposed project area. He expressed apprehensions that Railway department took six years to complete the project of converting Bangalore-Mysuru railway line to Broad gauge and the proposed project will take not less than 12 to 15 years. The daily movement of men and machinery during the implementation will have a serious impact on the surrounding forests causing much more degradation than the project itself. Therefore he requested the Chairman to drop the project.

Shri Appajigouda N B, Member of the Board said the approval of Hubli-Ankola railway line was already discussed in the previous meeting. Now the matter has already been elaborated by the Hon'ble Minister, Shri Jagadish Shettar and Shri R V Deshpande. He told that Former Prime Minister of India Shri Atal Bihari Vajpayee laid the foundation stone for the railway project. The Hon'ble Prime Minister is the Chairman of National Board for Wildlife and the matter is discussed there also. Therefore, he suggested that all the legal issues raised may be addressed and project be approved in the interest of people of North Karnataka.

The Chief Secretary, Karnataka, stressing the need to protect the environment & Western Ghats, said that the proposed project area is not a tiger reserve and the project can be implemented by taking appropriate mitigation measures. He further said that the project has been a dream of the people of North Karnataka for long time and the same is being discussed since several years now it's an opportunity to make a dream come true. Therefore, he requested to recommend the project.

The Additional Chief Secretary, FEE said the Hon'ble Minister for Forests, Ecology and Environment Department, Government of Karnatakais not present in this meeting, and that in previous Board meeting held on 9th March, he was of the opinion that the said project would be highly detrimental to forest and Western Ghats and had requested to drop the proposal. Therefore he requested the Chair to discuss the matter with the Minister of Forests and take a decision. He further said that, the Forest Department and the Infrastructure Development which are both part of Government of Karnataka have a different opinion in this regard. The Board's decision in the matter may be left to the Hon'ble Chairman and he can decide whether the matter should be discussed in the Cabinet or in the Board itself.

The Principal Secretary, Department of Social Welfare and Member of the Board stated that the department is concerned about the issues of rehabilitation and resettlement particularly scheduled communities and tribes, and recommended that for the development of north Karnataka the project is important and requested the chairman to approve the project.

The Principal Chief Conservator of Forest (Wildlife) & Chief Wildlife Warden and Member Secretary of the Board said that the report prepared by the IISc, Bengaluru is impractical and no forest officers were involved while preparing the Report. They have prepared the report without consulting the Chief Wildlife Warden and also not submitted a copy of the report to the Forest Department.

Shri Jagadish Shettar, Hon'ble Minister of Large and Medium Scale Industries said, IISc, Bengaluru is a reputed autonomous institute of the Country, while preparing the report they discussed all environmental and wildlife concerns, and necessary remedial and mitigation measures were incorporated and requested the Chairman to recommend the project. He further explained that the proposal recommended will not be ratified and approved without inspection by the Central Government.

The Chief Secretary replying to the apprehensions expressed by the members said that though the report prepared by experts from the IISc Bengaluru is of 2013 but the proposed project area has not changed and the forests are the same as they were in 2013 and hence the report is still relevant today. He further said to avoid degradation at the time of implementation of the project the workers/laborers engaged in laying rail line and other works would have to be compulsorily housed in nearby villages outside and away from the forest areas. The Chief Secretary further said that the proposals recommended from the State Board for Wildlife will be debated at the National Board for Wildlife and the National Board consists of experts from all fields and their opinions will be taken before according the final approval to the project and requested the chairman to recommend the proposal and submit to National Board.

After all the above deliberations, the Hon'ble Chief Minister and Chairman of Board opined that the development of the backward North Karnataka is very important and for the aspirations of the people living there and during the implementation of the project all necessary mitigation measures should be taken and the project needs to be recommended.

Hence The Board resolved to recommend the proposal to National Board for Wildlife.

The 14th State Board for Wildlife meeting concluded with a Vote of Thanks to the Chair.

**( B S Yediyurappa)**
Chairman, State Board for Wildlife
And Hon'ble Chief Minister,
Government of Karnataka.